ಮೊನ್ನೆ ಆರ್ಡರ್ ಕೊಟ್ಟಿದ್ದೀರಿ. ನನ್ನ ಪಕ್ಕದ ಬಾರ್ಡರ್ ಜಿಲ್ಲೆಯಾದ ಹಾಸನ ಜಿಲ್ಲೆಯಲ್ಲಿ ಅವರು ಇನ್ನೂ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಸೆಲೆಕ್ಟ್ ಮಾಡುವಂತಹ ಗೋಜಿಗೆ ಹೋಗಿಲ್ಲ. ನಾನು ನಿನ್ನೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಕೇಳಿ ತಿಳಿದುಕೊಂಡಿದ್ದೇನೆ. ತಾವು ಯಾವಾಗ ಡಾಕ್ಟರ್ಸ್‌ನ್ನು ನೇಮಕ ಮಾಡಿಕೊಳ್ಳುತ್ತೀರಿ?

**ಡಾ. ಹೆಚ್. ಸಿ. ಮಹದೇವಪ್ಪ :-** ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸಂಬಂಧ ವಿಲ್ಲದಿದ್ದರೂ ಸಹ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಗಮನದಲ್ಲಿಟ್ಟುಕೊಂಡು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ, 9 ಜಿಲ್ಲೆಗಳಿಂದ ಪಟ್ಟಿ ಬಂದಿದೆ. ಆ ಪಟ್ಟಿಯನ್ನು ಕ್ಲಿಯರ್ ಮಾಡಿ ಕಳುಹಿಸಿದ್ದೇನೆ. ಹಾಸನ ಜಿಲ್ಲೆಯಿಂದ ಕೂಡ 23 ಖಾಲಿ ಹುದ್ದೆಗಳಿತ್ತು. ಆದರಲ್ಲಿ 13 ಜನ ವೈದ್ಯರ ಪಟ್ಟಿ ಬಂದಿದೆ ಉಳಿದಂತಹ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಶೀಘ್ರದಲ್ಲಿಯೇ ಭರ್ತಿ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇನೆ. ಉಳಿದಂತಹ ಜಿಲ್ಲೆಗಳಲ್ಲಿ ಅತಿ ಜರೂರಾಗಿ ವೈದ್ಯರ ಹುದ್ದೆಗಳನ್ನು ತುಂಬುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಾನು ಟೆಲಿಕ್ಸ್ ಮೆಸ್ಸೆಜ್‌ನ್ನು ಸಹ ಕಳುಹಿಸುತ್ತಿದ್ದೇನೆ.

**ವಿಷಯ :- ಹರಪನಹಳ್ಳಿಯ 50 ಹಾಸಿಗೆಗಳ ಆಸ್ಪತ್ರೆ ಬಗ್ಗೆ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 385 (2601)

ಶ್ರೀ. ನಾರಾಯಣದಾಸ್ (ಹರಪನಹಳ್ಳಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಪನಹಳ್ಳಿಯ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಆ) ಸಾರ್ವಜನಿಕ ಆಸ್ಪತ್ರೆಯಲ್ಲಿ 50 ಕ್ಕಿಂತ ಕಡಿಮೆ ಹಾಸಿಗೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹಾಸಿಗೆಗಳನ್ನು ಯಾವಾಗ ಹೆಚ್ಚಿಸಲಾಗುವುದು?

ಡಾ. ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಹಾಲಿ 14 ಹಾಸಿಗೆಗಳು ಇರುತ್ತವೆ.

ಆ) ಬಂದಿದೆ.

ಇ) ಹರಪನಹಳ್ಳಿ ಆಸ್ಪತ್ರೆಯನ್ನು 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಿದ್ದು, ಕಟ್ಟಡದ ಕಾಮಗಾರಿ ಕಾರ್ಯ ಪೂರ್ಣಗೊಂಡ ಕಾರಣ ಹೆಚ್ಚುವರಿ ಸಿಬ್ಬಂದಿ, ಆವರ್ತ ಮತ್ತು ಅನಾವರ್ತ ವೆಚ್ಚಗಳ ಮಂಜೂರಾತಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

**ಶ್ರೀ ಜಿ. ನಾರಾಯಣದಾಸ್ :-** ಮಾನ್ಯ ಅಧ್ಯಕ್ಷರೇ, ಈಗ ತಮ್ಮ ಉತ್ತರದಲ್ಲಿ ಹಾಲಿ ಇರತಕ್ಕಂಥಾದ್ದು 14 ಹಾಸಿಗೆಗಳು ಮಾತ್ರ. ಹರಪನಹಳ್ಳಿ ಆಸ್ಪತ್ರೆಯಲ್ಲಿ 50 ಹಾಸಿಗೆಗಳು

ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಿದ್ದರೂ ಕೂಡ ಕಟ್ಟಡದ ಕಾಮಗಾರಿ ಕೆಲಸ ಪೂರ್ಣಗೊಂಡಿದೆ. ಅವರ್ತ ಮತ್ತು ಅನವರ್ತ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಈಗ ಅಲ್ಲಿ ಡಾಕ್ಟರ್ಸ್ ಕ್ವಾರ್ಟರ್ಸ್ ಅವಶ್ಯಕವಾಗಿ ಆಗಬೇಕಾಗಿದೆ. ಅಲ್ಲಿ ಕ್ವಾಟ್ರಸ್ ಇಲ್ಲದೇ ಇರುವ ಕಾರಣಕ್ಕಾಗಿ ಯಾರೂ ಡಾಕ್ಟರ್ಸ್ ಬರುತ್ತಿಲ್ಲ. ಈಗ ಜರ್ಮನ್ ಏಡ್ ಎಂದು ಎನು ಇದೆ ಅದನ್ನು ಸುಮಾರು 80 ಕೋಟಿ ರೂಪಾಯಿಗಳಿಗೆ ಏರಿಸಿದ್ದಾರೆ ಎಂದು ಗೊತ್ತಾಯಿತು. ಬಳ್ಳಾರಿ, ಗುಲ್ಬರ್ಗ, ಬೀದರ್, ರಾಯಚೂರು ಮತ್ತು ಬಿಜಾಪುರ ಈ ನಾಲ್ಕು ಜಿಲ್ಲೆಗಳಿಗೆ ಆ ಹಣ ಇದೆ ಎಂದು ತಿಳಿದು ಬಂದಿದೆ. ಈಗ ಕೆಳಗೆ 14 ಹಾಸಿಗೆಗಳಿಗೆ ಮಾತ್ರ ಜಾಗ ಇದೆ. ಆದ್ದರಿಂದ ಫಸ್ಟ್ ಫ್ಲೋರ್ ಕಟ್ಟುವುದಕ್ಕೆ ಡಾಕ್ಟರ್ಸ್ ಕ್ವಾರ್ಟರ್ಸ್ ಮತ್ತು ಸಿಬ್ಬಂದಿ ಕ್ವಾರ್ಟರ್ಸ್ ಕಟ್ಟಲಿಕ್ಕೆ ಜರ್ಮನ್ ಏಡ್ ಫಂಡ್‌ನಿಂದ ಏನಾದರೂ ಹಣದ ಸಹಾಯ ಮಾಡುತ್ತಾರಾ? ಯಾವಾಗ ಮಾಡುತ್ತೀರಿ?

**ಡಾ. ಹೆಚ್. ಸಿ. ಮಹದೇವಪ್ಪ :-** ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಆಸ್ಪತ್ರೆ 1989 ರಲ್ಲಿ 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸ ಲಾಯಿತು. ಆದರೆ ಈಗ 25 ಹಾಸಿಗೆಗಳು ಅನುಕೂಲವಾಗುವಂತಹ ಕಟ್ಟಡ ಕೆಳ ಅಂತಸ್ತಿ ನಲ್ಲಿ ಪೂರ್ಣಗೊಂಡಿದೆ. ಬಳ್ಳಾರಿ ಜಿಲ್ಲೆಯ ಜಿಲ್ಲಾ ಪರಿಷತ್ತು ತನ್ನ ಆಯವ್ಯಯದಲ್ಲಿ ಅಗತ್ಯ ಇರುವಂತಹ ಹಣವನ್ನು ಮಂಜೂರು ಮಾಡಿಕೊಟ್ಟಂತಹ ಸಂದರ್ಭದಲ್ಲಿ ಅದಕ್ಕೆ ಅವಶ್ಯಕ ಇರುವಂತಹ ಸಿಬ್ಬಂದಿ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತೇನೆಂದು ಹೇಳುವುದರ ಜೊತೆಗೆ ಗುಲ್ಬರ್ಗ ವಿಭಾಗದ ನಾಲ್ಕು ಪ್ರಮುಖ ಜಿಲ್ಲೆ ಗಳಿಗೆ ಆರೋಗ್ಯ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕಾಗಿ ಜರ್ಮನ್ ಸಂಸ್ಥೆ ಮುಂದೆ ಬಂದಿರುವ ವಿಷಯವನ್ನು ನಾನು ಅನೇಕ ಸಂದರ್ಭಗಳಲ್ಲಿ ಇಲ್ಲಿ ವ್ಯಾಖ್ಯಾನ ಮಾಡಿದ್ದೇನೆ ಮಾನ್ಯ ಸದ ಸ್ಯರೂ ಕೂಡ ಅದನ್ನು ಪ್ರಸ್ತಾಪ ಮಾಡಿದ್ದಾರೆ ಮೇಲ್ದರ್ಜೆಗೆ ಏರಿಸಿರುವಂತಹ ಸಂದರ್ಭ ದಲ್ಲಿ ಈ ಹಣವನ್ನು ಆ ವಿಭಾಗಕ್ಕೆ ಬಳಸಲಿಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡು ತ್ತೇನೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

**ವಿಷಯ :- ಕುಷ್ಟಗಿ ಕ್ಷೇತ್ರದ ಹನುಮನಾಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ದುರಸ್ತಿ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 386 (2849)

ಶ್ರೀ. ಕೆ. ಶರಣಪ್ಪ (ಕುಷ್ಟಗಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಷ್ಟಗಿ ಕ್ಷೇತ್ರದ ಹನುಮನಾಳ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವು ಕುಸಿದು ಬೀಳುವ ಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಇಲ್ಲ. ದುರಸ್ತಿಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.